ಶ್ರೀ ಶಿವಾನಂದ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಅದಕ್ಕೆ ನಾನು ಸೆಪರೇಟ್ ಪ್ರಶ್ನೆ ಹಾಕುತ್ತೇನೆ. ಅವೊತ್ತಿನ ದಿವಸ ಮಾನ್ಯ ಸಚಿವರು ಉತ್ತರ ಕೊಡಲಿ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ರೇವಣ್ಣನವರೇ, ಈಗ ಕೆ.ಹೆಚ್.ಡಿ.ಸಿ. ಪರಿಸ್ಥಿತಿ ಏನಾಗಿದೆ ಎಂದರೆ ಅದು ಲಾಸ್‌ನಲ್ಲಿ ನಡೆಯುತ್ತಿರುವುದರಿಂದ ಈಗ ಮುಚ್ಚುವಂಥ ಸ್ಥಿತಿಗೆ ಬಂದಿದೆ. ಇದರಿಂದ ಕೈಮಗ್ಗ ನೇಕಾರರು ಸಾಯುತ್ತಿದ್ದಾರೆ. ನೀವು ಹೇಳಿದ್ದು 14 ಸಾವಿರ ಎಂದು. ಆದರೆ ಕೇವಲ 12 ಸಾವಿರ ಉಳಿದಿವೆ. ಕೇವಲ 12 ಸಾವಿರ ಮಾತ್ರ ಇವೊತ್ತು ಮಗ್ಗಗಳು ಉಳಿದಿವೆ. ಆದರೆ ಸಿಬ್ಬಂದಿ ಮಾತ್ರ ಅಷ್ಟೇ ಇದ್ದಾರೆ. ಯಾವಾಗ 40 ಸಾವಿರ ಮಗ್ಗಗಳು ಇದ್ದಾಗ ಎಷ್ಟು ಸಿಬ್ಬಂದಿ ಇತ್ತೋ ಅಷ್ಟೇ ಸಿಬ್ಬಂದಿ ಇದ್ದಾರೆ. ಆ ಸಿಬ್ಬಂದಿಯಲ್ಲಿ ಕಡಿತ ಮಾಡಿ, ಪಾಸ್ ಕಡಿಮೆ ಮಾಡಿ. ನಿಮ್ಮ ಎಂ.ಡಿ. ಏನಿದ್ದಾರೆ ಅವರನ್ನು ಹುಬ್ಬಳ್ಳಿಯಲ್ಲಿರುವ ಕಛೇರಿಗೆ ಬಂದು ಕೆಲಸ ಮಾಡುವುದಕ್ಕೆ ನೀವು ಹೇಳಿ. ಸಿಬ್ಬಂದಿಯವರಿಗೂ ಕೂಡ ಹುಬ್ಬಳ್ಳಿಯ ಕಛೇರಿಗೆ ಹೋಗಿ ಕೆಲಸ ಮಾಡುವುದಕ್ಕೆ ತಿಳಿಸಿ. ಪರ್ಚೇಸ್ ಡಿಪಾರ್ಟ್‌ಮೆಂಟ್ ಅಲ್ಲಿಯೇ ಇರಲಿ.

ಶ್ರೀ ಹೆಚ್. ಎಂ. ರೇವಣ್ಣ : ಮಾನ್ಯ ಶಿವಾನಂದ ಪಾಟೀಲರು ಇದರ ಬಗ್ಗೆ ಪ್ರತ್ಯೇಕ ಪ್ರಶ್ನೆ ಹಾಕುತ್ತಾರಂತೆ. ಆಗ ಇದರ ಬಗ್ಗೆ ಮಾತನಾಡೋಣ. ಈಗ ನಡೆಯುತ್ತಿರುವ ಪ್ರಶ್ನೋತ್ತರ ವೇಳೆಯಲ್ಲಿ ಕೇಳಿರುವ ಪ್ರಶ್ನೆಗೆ ಉತ್ತರ ಕೊಟ್ಟಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್ : ನಿಮ್ಮ ಇಲಾಖೆಯವರೇ ಕೆ.ಹೆಚ್.ಡಿ.ಸಿ.ಯವರಿಂದಲೇ ತೆಗೆದುಕೊಂಡರೇ ಅದೇ ಸಾಕಷ್ಟು ಆರ್ಡರ್ ಆಗುತ್ತದೆ. ನಿಮ್ಮ ಸಹಕಾರಿ ಇಲಾಖೆಗಳವರೇ ಖರೀದಿ ಮಾಡಿದರೆ ಅದೇ ಸಾಕಷ್ಟಾಗುತ್ತದೆ.

ಶ್ರೀ ಹೆಚ್.ಎಂ. ರೇವಣ್ಣ : ಅಧ್ಯಕ್ಷರೆ ರೂಲಿಂಗ್ ಕೊಟ್ಟರು. ಈ ಸಬ್ಜೆಕ್ಟ್ ಇನ್ನೊಂದು ಸಲ ತೆಗೆದುಕೊಳ್ಳೋಣ ಎಂದು ಮಾನ್ಯ ಡಿ.ಆರ್. ಪಾಟೀಲ್‌ರವರ ಪ್ರಶ್ನೆ ಬರಲಿ ಎಂದು. ಒಂದೇ ಸಲ ಹೇಳಿದ್ದಾರೆ. ಪುನಃ ಎರಡನೇ ಬಾರಿ ಹೇಳಬೇಕೆ?

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಡಿ.ಆರ್. ಪಾಟೀಲ್‌ರವರ ಪ್ರಶ್ನೆ ಬಂದಾಗ ಚರ್ಚೆ ಮಾಡೋಣವಂತೆ.

ಶ್ರೀ ಹೆಚ್.ಎಂ. ರೇವಣ್ಣ : ಪ್ರಶ್ನೆ ಬಂದಾಗ ನಾನು ಉತ್ತರ ಕೊಡುವುದಕ್ಕೆ ಸಿದ್ಧನಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್ : ಹಾಗೆಯೇ ಮಾಡಿ.

ಅಧ್ಯಕ್ಷರು : ನೆಕ್ಸ್ಟ್ ಪ್ರಶ್ನೆ ಶ್ರೀ ಎ.ನಾರಾಯಣಸ್ವಾಮಿ ಹಾಗೂ ಶ್ರೀ ರೇವುನಾಯಕ್‌ರವರ ಇಬ್ಬರ ಪ್ರಶ್ನೆಗಳು ಈಗ ಬರುತ್ತಿವೆ. ಪ್ರಶ್ನೆ ಕೇಳಿ.

ಆನೇಕಲ್ ತಾಲ್ಲೂಕಿನಲ್ಲಿರುವ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ ನೀಡಬೇಕಾದ ಸಹಾಯಧನದ ಬಗ್ಗೆ

467(4149) ಶ್ರೀ ಎ.ನಾರಾಯಣಸ್ವಾಮಿ(ಆನೇಕಲ್) : ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕೆ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ ನೀಡಬೇಕಾಗಿರುವ ಸಹಾಯಧನದ ತಾಲ್ಲೂಕುವಾರು ವಿವರ ನೀಡುವುದು;

ಆ) ಆನೇಕಲ್ ತಾಲ್ಲೂಕಿನ ವಿಧಾನಸಭಾ ಕ್ಷೇತ್ರದಲ್ಲಿ ಬಾಕಿ ಉಳಿದಿರುವ ಒಟ್ಟು ಸಹಾಯಧನದ ಮೊತ್ತವೆಷ್ಟು;

ಇ) ನೇಕಾರಿಕೆ ಕೈಗಾರಿಕೆಗಳು ಮತ್ತು ಇಟ್ಟಿಗೆ ಕೈಗಾರಿಕೆ ಇತರೆ ಸಣ್ಣ, ಅತಿ ಸಣ್ಣ ಗೃಹ ಕೈಗಾರಿಕೆಗಳಿಗೆ ಸಹಾಯಧನ ಬಿಡುಗಡೆ ಮಾಡಲು ಸರ್ಕಾರದ ಕ್ರಮವೇನು:

ಈ) ಸರ್ಕಾರವು ಬಿಡುಗಡೆ ಮಾಡಲು ನಿರ್ಧರಿಸಿರುವ ಹಣವೆಷ್ಟು?

ಶ್ರೀ ಆರ್. ರೋಷನ್ ಬೇಗ್ (ಸಣ್ಣ ಪ್ರಮಾಣದ ಕೈಗಾರಿಕೆ ಮತ್ತು ಹಜ್ ಸಚಿವರು) :

ಅ) ರಾಜ್ಯದಲ್ಲಿ ಸಣ್ಣ ಮತ್ತು ಅತಿ ಸಣ್ಣ ಕೈಗಾರಿಕೆಗಳಿಗೆ ಮಾತ್ರ ಸಹಾಯಧನವನ್ನು ನೀಡಲಾಗುವುದು. ದಿನಾಂಕ: 1.1.99ರಿಂದ 31.3.2003ರ ಅಂತ್ಯಕ್ಕೆ ರೂ. 405.67 ಕೋಟಿಗಳಷ್ಟು ಸಹಾಯಧನ ಬಿಡುಗಡೆಗಾಗಿ ಬಾಕಿ ಇರುತ್ತದೆ. ಜಿಲ್ಲಾವಾರು ವಿವರವನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ.

ಆ) ಆನೇಕಲ್ ತಾಲ್ಲೂಕಿನ ವಿಧಾನಸಭಾ ಕ್ಷೇತ್ರದಲ್ಲಿ ಬಾಕಿ ಉಳಿದಿರುವ ಒಟ್ಟು ಸಹಾಯಧನದ ಮೊತ್ತ ರೂ. 38,97,55,570 ಲಕ್ಷಗಳು.

ಇ) ಅನುದಾನದಿಂದ ಬಿಡುಗಡೆಯಾಗುವ ಸಹಾಯಧನದ ಮೊತ್ತದ ಆಧಾರದ ಮೇಲೆ ವಿವಿಧ ಕಸುಬುಗಳಿಗೆ ಜೇಷ್ಟತೆ ಹಾಗೂ ಆದ್ಯತೆ ಮೇರೆಗೆ ಸಹಾಯಧನವನ್ನು ಬಿಡುಗಡೆಗೊಳಿಸಲಾಗುವುದು.

ಈ) ಈ ಸಾಲಿನ ಆಯವ್ಯಯದಲ್ಲಿ ಸಹಾಯಧನ ಬಿಡುಗಡೆಗಾಗಿ ರೂ.12.00 ಕೋಟಿಗಳಷ್ಟು ನಿಗದಿಪಡಿಸಲಾಗಿದೆ.

Annexure-I

District-wise details of State Investment subsidy as on March 2003.

Sl.No.	Name of the District	Total No. of Units	Amount
1	2	3	4
1.	Bangalore(U)	1349	6353.38
2.	Bangalore(R)	1750	5196.97
3.	Bagalkot	401	715.87
4.	Belgaum	1448	1955.27
5.	Bellary	602	1557.28
6.	Bidar	554	521.25
7.	Bijapur	503	779.11
8.	Chamarajanagar	223	266.93
9.	Chitradurga	411	806.05
10.	Chickmagalur	281	427.53
11.	Davangere	302	678.24
12.	Dharwad	704	1518.14
13.	D.K.	874	1787.23
14.	Gadag	320	333.59

1	2	3	4
15.	Gulbarga	429	1028.54
16.	Hassan	576	844.57
17.	Haveri	237	286.00
18.	Karwar	1154	1869.27
19.	Kodagu	150	378.03
20.	Kolar	1625	3662.06
21.	Koppal	235	985.35
22.	Mandya	401	576.81
23.	Mysore	913	2452.00
24.	Raichur	242	616.61
25.	Shimoga	421	695.91
26.	Tumkur	1269	2681.62
27.	Udupi	905	1653.75
	Total:	**18279**	**40567.36**

ಗುಲ್ಬರ್ಗ ಜಿಲ್ಲೆಯಲ್ಲಿನ ಸಣ್ಣ ಕೈಗಾರಿಕೆಗಳಿಗೆ ಸಹಾಯಧನ ನೀಡುವ ಬಗ್ಗೆ

474(4162) ಶ್ರೀ ರೇವುನಾಯಕ ಬೆಳಮಗಿ(ಕಮಲಪೂರ್) : ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯಲ್ಲಿರುವ ಒಟ್ಟು ಸಣ್ಣ ಕೈಗಾರಿಕೆಗಳ ಸಂಖ್ಯೆ ಎಷ್ಟು;

ಆ) ಇವುಗಳ ಪೈಕಿ ಎಷ್ಟು ಕೈಗಾರಿಕೆಗಳಿಗೆ ಸಹಾಯಧನವನ್ನು ಮಂಜೂರು ಮಾಡಲಾಗಿದೆ;(ವಿವರ ಒದಗಿಸುವುದು);

ಇ) ಇನ್ನೂ ಎಷ್ಟು ಸಣ್ಣ ಕೈಗಾರಿಕೆಗಳಿಗೆ ಈ ಸಹಾಯಧನವನ್ನು ನೀಡಬೇಕಾಗಿದೆ; ಈ ಮೊತ್ತವೆಷ್ಟು; ಯಾವಾಗ ನೀಡಲಾಗುವುದು?

ಶ್ರೀ ಆರ್.ರೋಷನ್ ಬೇಗ್ (ಸಣ್ಣ ಪ್ರಮಾಣದ ಕೈಗಾರಿಕಾ ಮತ್ತು ಹಜ್ ಸಚಿವರು) :

ಅ) ಗುಲ್ಬರ್ಗಾ ಜಿಲ್ಲೆಯಲ್ಲಿ ಜುಲೈ 2003ರವರೆಗೆ 11228 ಸಣ್ಣ ಮತ್ತು ಅತಿ ಸಣ್ಣ ಕೈಗಾರಿಕೆಗಳನ್ನು ನೋಂದಾಯಿಸಲಾಗಿದೆ.

ಆ) ಇಲ್ಲಿಯವರೆಗೆ 1501 ಕೈಗಾರಿಕೆಗಳಿಗೆ ರಾಜ್ಯ ಸಹಾಯಧನ ಮಂಜೂರು ಮಾಡಲಾಗಿದೆ.

ಇ) 432 ಘಟಕಗಳಿಗೆ ಸಹಾಯಧನ ನೀಡಬೇಕಾಗಿದೆ. ಈ ಮೊತ್ತ ರೂ. 11.47 ಕೋಟಿಯಾಗಿರುತ್ತದೆ. ಆಯವ್ಯಯದಲ್ಲಿ ಹೆಚ್ಚಿನ ಅನುದಾನವನ್ನು ಒದಗಿಸಿ ಆದಷ್ಟು ಬೇಗನೆ ಸಹಾಯಧನ ಬಿಡುಗಡೆ ಮಾಡಲು ವಿಶೇಷ ಪ್ರಯತ್ನ ಮಾಡಲಾಗುತ್ತಿದೆ.

ಶ್ರೀ ಎ.ನಾರಾಯಣ ಸ್ವಾಮಿ : ಮಾನ್ಯ ಅಧ್ಯಕ್ಷರೆ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳಿಗೆ ಕೊಡಬೇಕಾದ ಸಬ್ಸಿಡಿ ಬಾಕಿ ಎಷ್ಟು ಇದೆ ಎಂದು ನಾನು ಪ್ರಶ್ನೆ ಕೇಳಿರುವುದಕ್ಕೆ ಕಳೆದ ಮೂರು ವರ್ಷಗಳಿಂದ ಒಟ್ಟು 405 ಕೋಟಿ ರೂ.ಗಳು ರಾಜ್ಯದಲ್ಲಿ ಸಬ್ಸಿಡಿ ಕೊಡಬೇಕಾದ್ದು ಬಾಕಿ ಇದೆ ಎಂದು ಹೇಳಿದ್ದಾರೆ. ನನ್ನ ಕ್ಷೇತ್ರದ್ದು ಎಷ್ಟು ಬಾಕಿ ಇದೆ ಎಂದು ಕೇಳಿರುವುದಕ್ಕೆ ಸುಮಾರು